"ಈ ವರ್ಷ ನಾವು ಮನೆಗೆ ಗಣೇಶ ತರುವನಾ?" ಸುನಿಲ್‌ನನ್ನುದ್ದೇಶಿಸಿ ಕೇಳಿದ ದೀಪಾಳ ದನಿಯಲ್ಲಿ ಉತ್ಸಾಹ ತುಳುಕುತ್ತಿತ್ತು. ಆ ಬೆಳಗು ಫಿಲ್ಟರ್ ಕಾಫಿಯ ಘಮದಿಂದ ಕೂಡಿತ್ತು. ಸೋಸಿ, ಹಾಲು, ಸಕ್ಕರೆ ಬೆರೆಸಿದ ಫಿಲ್ಟರ್ ಕಾಫಿ! ಎಲ್ಲ ವಾರಾಂತ್ಯದ ಬೆಳಗುಗಳಂತೆ ಸುನಿಲ್ ಕಣ್ಣು ಇನ್ನೂ ಬಾಡಿತ್ತು. ಒಂಬತ್ತಕ್ಕೆ ಮುನ್ನ ಎಂದೂ ಏಳದ, ಕೆಲವೊಮ್ಮೆ ಹತ್ತೂ ಆಗುವ, ಸುನಿಲ್‌ಗೆ ರಾತ್ರಿ ಮೋಜುಪಾರ್ಟಿ ಆಗಿ ತಡವಾಗಿದ್ದರೆ ಏಳುವಾಗ ಹನ್ನೊಂದೂ ಆಗುತ್ತಿತ್ತು. ಕಾಫಿಗೂ ಕರಗದ ನಿದ್ದೆಯ ಮಬ್ಬಿನಲ್ಲಿ "ಹ್ಞ!" ಎಂದಷ್ಟೇ ಉದ್ಗಾರ ಅವನಿಂದ ಹೊರಟಿತು.

"ಈ ವರ್ಷ ಗಣೇಶನನ್ನು ತರುವುದೇ ಉತ್ತಮವೆಂದು ನನಗನಿಸ್ತಿದೆ. ನಾವು ಚಿಕ್ಕವರಿದ್ದಾಗ ಪಟ್ಟ ಸಂತಸ ನಮ್ಮ ಮಕ್ಕಳದೂ ಆಗಬೇಡವೇ?" ಕ್ಷಣ ತಡೆದು, ಎಂದಿನ ನಿರ್ಲಿಪ್ತತೆಯಿಂದ ಅವನಂದ, "ಒಮ್ಮೆ ಗಣೇಶನನ್ನು ತಂದರೆ ಮತ್ತೆ ಅದು ಎಂದಿನ ಕಲಾಪವಷ್ಟೆ; ಏನೋ ಅನಾನುಕೂಲವೆಂದು ಬಿಟ್ಟು ಬಿಡಲಾಗದು, ಬಲ್ಲೆಯಷ್ಟೇ?" ಅವನ ಮಟ್ಟಿಗೆ, ಸಂಕಟಹರ ಗಜಮುಖನ ಸಾಂಪ್ರದಾಯಿಕ ಪೂಜೆಯ ಬಗ್ಗೆ ನೆನಪಿಡಲೇಬೇಕಾದ ಮುಖ್ಯ ವಿಷಯವಾಗಿತ್ತದು.

"ಹೇಳಬೇಕಾದ್ದೇ ಇಲ್ಲ!" ಒದರಿದಳು, ದೀಪಾ. ಹೊಸದೇನನ್ನಾದರೂ ಎಂದಾದರೂ ತಾನು ಸೂಚಿಸಿದರೆ ಅಡ್ಡಿಯೊಡ್ಡುವುದೇ ಸುನಿಲ್‌ನ ಅಭ್ಯಾಸ ಎಂದು ಸಿಟ್ಟಾಗುತ್ತಿದ್ದಳು, ಅವಳು. ಅವಳು ಹೇಳುವುದೂ ಸರಿಯೇ ಇತ್ತು. ಕುಳಿತಲ್ಲೇ ಕುಳಿತಿದ್ದು, ಜಗತ್ತೇ ತನ್ನ ಸುತ್ತ ತಿರುಗುತ್ತಿರಲೆಂದು ಬಯಸುವವನು, ಅವನು! ವಿಘ್ನವಿನಾಶಕನೇ ತನ್ನ ಸಹಾಯಕ್ಕೆ ಬರುವನೆಂದು ಆಶಿಸುತ್ತಿದ್ದಳು, ದೀಪಾ.

ದುಃಖವನ್ನು ಪರಿಹರಿಸಿ ಸುಖವನ್ನು ನೀಡುವವನಲ್ಲವೇ, ಅವನು?

ಆ ವರ್ಷ ದೀಪಾ, ಸುನಿಲ್‌ರ ಪಾಲಿಗೆ ತುಂಬ ವ್ಯಸ್ತವಾದುದಾಗಿತ್ತು.

ಎಲಿಮೆಂಟರಿಯಿಂದ ಮಿಡ್ಲ್ ಸ್ಕೂಲ್‌ಗೆ ಬಂದಿದ್ದ ಅವರ ಮೊದಲ ಮಗ, ರವಿ ತನ್ನ ಹೊಸ ದಿನಚರಿಗೆ ಸುಲಭದಲ್ಲಿ ಹೊಂದಿಕೊಂಡಿರಲಿಲ್ಲ. ಅದರ ನಡುವೆ, ವಾಸದ ಮನೆಯೂ ಬದಲಾಗಿತ್ತು. ಶಾಲೆಯಲ್ಲಿ ಹೊಸ ಗೆಳೆಯರನ್ನು ಅರಸುವ ಕಷ್ಟದೊಡನೆ ಹೊಸ ನೆರೆಕರೆಗೂ ರವಿ ಹೊಂದಿಕೊಳ್ಳಬೇಕಿತ್ತು. ನಡೆದು ಹೋಗುವಷ್ಟು ಸನಿಹದಲ್ಲಿ ಯಾವ ಗೆಳೆಯರ ಮನೆಗಳೂ ಇರಲಿಲ್ಲ. ಚಿಕ್ಕವನಿದ್ದಾಗ ಆಟಕ್ಕಾಗಿ ದಿನ ನಿಶ್ಚಯ ಮಾಡಬೇಕೆಂದರೆ ವಾರಗಳ ಮೊದಲೇ ಫೋನ್ ಕರೆ ಮಾಡಬೇಕಿತ್ತು. ಪ್ರತಿದಿನವೂ ಈ ಸ್ಥಳ ಬದಲಾವಣೆಯನ್ನು ತಡೆಯಲು ಹೊಸ ಹೊಸ ನೆಪಗಳನ್ನೊಡ್ಡುತ್ತಿದ್ದ, ರವಿ. ಅವನ ಹೆತ್ತವರಿಗೆ ಇದು ಸಹಿಸಲು ಅಸಾಧ್ಯವಾಯ್ತು. ಅದುವರೆಗಿನ ಸುದೀರ್ಘ ಸಂಬಂಧದಲ್ಲಿ ಬಿರುಕು ಮೂಡತೊಡಗಿತ್ತು. ವೈವಾಹಿಕ ಬಂಧ ಬಹಳಷ್ಟನ್ನು ತಾಳಿಕೊಂಡಿತ್ತು. ಅತ್ತೆ, ಮಾವಂದಿರೊಡನೆ ಸಹಜೀವನ, ಉದ್ಯೋಗ ಅರಸಿ ದೇಶಾಂತರ ಪಯಣ, ದೀಪಾಗೆ ಯುನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ, ಮಗುವಿನ ಜನನ ಮತ್ತು ಅವನ ಬಾಲ್ಯ ಎಲ್ಲದರ ಕೊನೆಗೀಗ ಅವರ ದಾರಿ ಭಿನ್ನವಾಗುವುದರಲ್ಲಿತ್ತು. ಹದಿಹರೆಯದ ಇಂದಿನ ಹುಡುಗರು ತನ್ನತ್ತ ಸವಾಲುಗಳನ್ನೆಸೆದಾಗಲೆಲ್ಲ ತನ್ನ ರಕ್ಷೆಗಾಗಿ ಆಧ್ಯಾತ್ಮ, ದೇವರು, ಹಿಂದೆ ಕಲಿತ ಸಂಸ್ಕೃತಿಯ ಪಾಠಗಳತ್ತ ವಾಲುತ್ತಿದ್ದಳು, ಅವಳು.

ಗಣೇಶ ಚತುರ್ಥಿ ವಾರದ ದಿನದಲ್ಲಿ ಬಂದುದರಿಂದ, ಅದರ ಹಿಂದಣ ವಾರಾಂತ್ಯವೇ ಗಣೇಶ ಮೂರ್ತಿಯನ್ನು ಮನೆಗೆ ತರಬೇಕಿತ್ತು. ಇಂಡಿಯನ್ ಸ್ಟೋರ್‌ಗಳಿಂದ ಖರೀದಿ ಸುನಿಲ್‌ಗೆ